ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯಕ್ಕೆ ದಾಖಲಾದ ಪ್ರಕರಣಗಳು.

1287. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ಪ್ರಕರಣಗಳು ಇದುವರೆಗೆ ಎಷ್ಟು ದಾಖಲಾಗಿವೆ ;

ಆ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಜಮೀನುಗಳನ್ನು ಬಲಾಡ್ಯರು ಒತ್ತುವರಿಮಾಡಿ ದೌರ್ಜನ್ಯದಿಂದ ಸಾಗುವಳಿ ಮಾಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಅಂತಹ ಪ್ರಕರಣಗಳಲ್ಲಿ ದುರ್ಬಲ ವರ್ಗದವರಿಗೆ ನ್ಯಾಯ ದೊರಕಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲಾಗುವುದು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ ಇದುವರೆವಿಗೆ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

1989	1990	1991	1992 (ಈ ದಿನಾಂಕದವರೆಗೆ)
974	785	787	63

ಆ) ಹೌದು

ಇ) ಇಂತಹ ಪ್ರಕರಣಗಳಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ (ದೌರ್ಜನ್ಯ ನಿವಾರಣಾ) ಕಾಯ್ದೆ 1989ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.
ಈ ಕಾಯ್ದೆಯ ಕಲಂ 3.1 (4), (5) ರ ಪ್ರಕಾರ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರನ್ನು ಅವರುಗಳ ಜಮೀನಿನಿಂದ ಬಿಡಿಸುವುದು ಘೋರ ಅಪರಾಧವೆಂದು ಪರಿಗಣಿಸಲಾಗಿದೆ. ಈ ಅಪರಾಧಕ್ಕೆ ಜಾಮೀನು ಬಿಡುಗಡೆ ಇರುವುದಿಲ್ಲ. ಹಾಗೂ ಈ ಪ್ರಕರಣಗಳನ್ನು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗುವುದು. ನಿರೀಕ್ಷಣಾ ಜಾಮೀನು ಸಹ ಈ ಪ್ರಕರಣದಲ್ಲಿ ನೀಡಲು ಬರುವುದಿಲ್ಲ.

ಕಲ್ಲೂರು ಗ್ರಾಮದಲ್ಲಿ ಪ್ರಸೂತಿ ಕೇಂದ್ರಕ್ಕೆ ಸಿಬ್ಬಂದಿಯ ಮಂಜೂರಾತಿ.

1284. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಗುಬ್ಬಿ ತಾಲ್ಲೂಕು ಕಲ್ಲೂರು ಗ್ರಾಮದಲ್ಲಿ ಪ್ರಸೂತಿ ಕೇಂದ್ರಕ್ಕೆ ಮಂಜೂರಾತಿ ನೀಡಿದ್ದು ಇದಕ್ಕೆ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲಾಗಿದೆಯೇ ;

ಆ) ಇಲ್ಲಿದಿದ್ದಲ್ಲಿ ಅದರಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಇ) ಹಾಗಿದ್ದರೆ, ಸಿಬ್ಬಂದಿ ವರ್ಗದವರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಕಲ್ಲೂರು ಗ್ರಾಮಕ್ಕೆ ಪ್ರಸೂತಿ ಗೃಹ ಮಂಜೂರಾಗಿರುವುದಿಲ್ಲ.

ಆ) ಹೌದು

ಇ) ಪ್ರಸೂತಿ ಗೃಹ ಮಂಜೂರಾತಿ ಕಟ್ಟಡದ ಕೆಲಸ ಸಂಪೂರ್ಣವಾದ ನಂತರ.